# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **330**
ಸದಸ್ಯರ ಹೆಸರು : ಶ್ರೀ ಬಿ.ಎಂ.ಫಾರೂಖ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : **15.02.2023.**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾನ-ಬಾಣೆ ಎಂದು ವರ್ಗೀಕರಿಸಲ್ಪಟ್ಟ ಭೂಮಿಯ ಹಕ್ಕು ಪ್ರಮುಖವಾಗಿ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆ ಪ್ರದೇಶದ ಕೃಷಿಕರಿಗೆ ಕೃಷಿ ಚಟುವಟಿಕೆಗಳಿಗಾಗಿ ಅತ್ಯವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 79(2)ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಮ್ಕಿ ಭೂಮಿಗಳು, ಬಾಣೆ ಭೂಮಿಗಳು ಮತ್ತು ಕಾಣೆ ಭೂಮಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿನ ಬೆಟ್ಟ ಭೂಮಿಗಳು ಮತ್ತು ಹಾಡಿ ಭೂಮಿಗಳು, ಮೈಸೂರು ಪ್ರದೇಶದಲ್ಲಿನ ಕಾನು ಮತ್ತು ಸೊಪ್ಪಿನ ಬೆಟ್ಟ ಭೂಮಿಗಳು, ಕೊಡಗಿನ ಜಮ್ಮಾ ಮತ್ತು ಬಾಣೆ ಭೂಮಿಗಳು ಮತ್ತು ಹೈದರಾಬಾದ್ ಪ್ರದೇಶದಲ್ಲಿನ (ಮೋಟಸ್ಥಲ್ ತರಿ ಭೂಮಿಗಳು) (Motasthal wet lands) ಇವುಗಳ ಬಗೆಗಿನ ವಿಶೇಷಾಧಿಕಾರಗಳು ಮುಂದುವರಿಯತಕ್ಕದ್ದು ಎಂದು ತಿಳಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಸದರಿ ಹಕ್ಕು ನೀಡಿಕೆ ಕುರಿತಾದ ಶಾಸನ-ಕಾಯಿದೆ-ನಿಯಮಗಳ ಬಗ್ಗೆ ವಿವರ ನೀಡುವುದು; | |
| ಇ) | ಈ ಬಗ್ಗೆ ಸರ್ಕಾರವು ಸದನದಲ್ಲಿ ಆಶ್ವಾಸನೆ ನೀಡಿದ್ದು ಇದು ಯಾವಾಗ ಜಾರಿಗೆ ಬರಲಿದೆ; ಇದುವರೆಗಿನ ವಿಳಂಬಕ್ಕೆ ಕಾರಣಗಳೇನು; | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 01 ಸಿ.ಎಸ್.ಸಿ. 2022 ದಿನಾಂಕ: 29.01.2022ರಲ್ಲಿ ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಒಂದು ನೀತಿಯನ್ನು ರೂಪಿಸುವ ಸಲುವಾಗಿ ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದ್ದು ಸದರಿ ಸಮಿತಿಯ ಅಂತಿಮ ನಿರ್ಣಯದಂತೆ ಕ್ರಮವಹಿಸಲಾಗುವುದು. |
| ಈ) | ಆಶ್ವಾಸಿಸಿದ ಹಕ್ಕು ಯಾವಾಗ ಜಾರಿಗೆ ಬರುವುದು-ಅಧ್ಯಾದೇಶದ ರೂಪದಲ್ಲಿ ಕೃಷಿಕರಿಗೆ ಅನುಕೂಲ, ಸಹಾಯ ಒದಗಿಸುವ ಬಗ್ಗೆ ಸರ್ಕಾರದ ಕ್ರಮಗಳೇನು? | |

ಸಂಖ್ಯೆ: ಆರ್‌ಡಿ 24 ಎಲ್‌ಜಿಕ್ಯೂ 2023

(ಆರ್.ಅಶೋಕ)
ಕಂದಾಯ ಸಚಿವರು